ದಿನಾಂಕಃ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ವಾದಿಗಳು ನನಗೆ ಪರಿಚಯ ಇರುತ್ತಾರೆ. ವಾದಿಗಳು ನಮಗೆ ಸೇರಿದ ಆಸ್ತಿಯ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಗಳು ಎಷ್ಟು ಜನ ಇದ್ದಾರೆ ಎಂದರೆ ನನಗೆ ಗೊತ್ತಿರುತ್ತದೆ. ವಾದಿಗಳ ಹೆಸರು ನನಗೆ ಗೊತ್ತಿರುತ್ತದೆ. ದಾವಾ ಸರ್ವೆ ನಂಬರ ನನಗೆ ಗೊತ್ತಿರುತ್ತದೆ. ವಾದಿಗಳು ದಾವಾ ಸರ್ವೆ ನಂಬರಿನಲ್ಲಿ 7 ಎಕರೆ ವಿಸ್ತೀರ್ಣಕ್ಕೆ ದಾವೆಯನ್ನು ಸಲ್ಲಿಸಿರುತ್ತಾರೆ. ದೊಡ್ಡಯ್ಯ ಯಾರು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ದೊಡ್ಡಯ್ಯರವರನ್ನು ನೋಡಿರುವುದಿಲ್ಲ. ದೊಡ್ಡಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

2) ದಾವಾ ಸ್ವತ್ತು ದೊಡ್ಡಯ್ಯ ರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ವಾದಿಗಳ ಕುಟುಂಬದ ಮೂಲ ಪುರುಷ ದೊಡ್ಡಯ್ಯ ಎಂದರೆ ಸರಿ. ದೊಡ್ಡಯ್ಯ ರವರಿಗೆ ಮೂರು ಜನ ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ದೊಡ್ಡಯ್ಯ ರವರಿಗೆ ಸರ್ಕಾರಿದಿಂದ 5 ಎಕರೆ 33 ಗುಂಟೆ ಮಂಜೂರಾಗಿರುತ್ತದೆ ಎಂದರೆ ಸರಿ. ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಗಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿನಲ್ಲಿ ಇರುವ 5 ಎಕರೆ 33 ಗುಂಟೆಯಲ್ಲಿ ನಾವೇ ಸ್ವಾಧೀನ ಇರುತ್ತೇವೆ. 1977 ರಿಂದ ನಮ್ಮ ಕುಟುಂದವರು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇರುತ್ತೇವೆ. ದಾವಾ ಸ್ವತ್ತು ನಮಗೆ ಕ್ರಯದ ಮೂಲಕ ಬಂದಿರುತ್ತದೆ.

3) ನಾನು ವೃತ್ತಿಯಲ್ಲಿ ಶಿಕ್ಷಕ ಎಂದರೆ ಸರಿ. ನಾನು ಆರ್ಥಿಕವಾಗಿ ಚೆನ್ನಾಗಿ ಇರುತ್ತೇನೆ ಎಂದರೆ ಸರಿ. ಕಂದಾಯ ಅಧಿಕಾರಿಗಳು ನನ್ನ ಮಾತು ಕೇಳುತ್ತಾರೆ ಎಂದರೆ ಸರಿಯಲ್ಲ. ನಾನು ಕಂದಾಯ ಅಧಕಾರಿಗಳ ಜೊತೆ ಶಾಮಿಲಾಗಿ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕ ಇರುವ ಜಮೀನುಗಳು ನನ್ನದೇ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮ ಮತ್ತು ಪೂರ್ವಕ್ಕೆ ನನಗೆ ಸೇರಿದ ಜಮೀನು ಇರುತ್ತದೆ. ಕ್ರಯ ಪತ್ರಗಳಿಗೆ ವಾದಿಯರ ಒಟ್ಟು ಕುಟುಂಬದ ಎಲ್ಲ ಸದಸ್ಯರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ